ಅಧಿಕಾರಿಯನ್ನು ತಂದು ಅವರ ಮುಖಾಂತರ signature ಮಾಡಿಸಿಕೊಂಡು, ಲೋಕಾಯುಕ್ತ reportನ್ನು ಅಲ್ಲಗಳೆಯುವಂತಹ ಪ್ರಸಂಗ ಏಕೆ ಬಂತು? ಅದು ಈ ಸದನದ ಮುಖಾಂತರ ಚರ್ಚೆಯಾಗಬೇಕು. ಇದಕ್ಕಾಗಿ ನಾವು ಸೀಮಿತವಾಗಿ ತಂದಿದ್ದೇವೆ ಹೊರತಾಗಿ, ಆ ವಿಷಯವಾಗಿ ಗಹನವಾಗಿ ನೀವೆಲ್ಲಾ mapಗಳನ್ನು ಇಡುತ್ತೀರಿ, ಏನೇನು ಇದೆ, ಯಾರ್ಯಾರು involve ಆಗಿದ್ದಾರೆ ಎನ್ನುವುದನ್ನು ಹೇಳಿ. ನಾವು ಅದನ್ನು ultimate ಆಗಿ ಸಿ.ಬಿ.ಐ ತನಿಖೆ ಆಗಲಿ ಎಂದು ಒಪ್ಪಿಕೊಂಡಿದ್ದೇವೆ. ಏಕೆಂದರೆ, ನಿನ್ನೆ ಮೇಲ್ಮನೆಯಲ್ಲಿಯೂ ಕೂಡ ಮಾನ್ಯ ಜನಾರ್ಧನ ರೆಡ್ಡಿಯವರು ಒಪ್ಪಿಕೊಂಡಿದ್ದಾರೆ. ನಾನೇ ಅದರ Director ಆಗಿದ್ದೇನೆ. ಇವತ್ತು ಇದ್ದೇನೆ, ನಾಳೆಯೂ ಇರುತ್ತೇನೆ, ಮುಂದೆಯೂ ಇರುತ್ತೇನೆಂದು ಅವರೇ ಹೇಳಿದ್ದಾರೆ. ಒಬ್ಬ ಈ ಸದನದ ಸದಸ್ಯ, ಮಂತ್ರಿ ಅವರೂ ಒಪ್ಪಿಕೊಂಡ ಮೇಲೆ ಅದನ್ನು ನೀವು ನೇರವಾಗಿ ಸಿ.ಬಿ.ಐಗೆ ಒಪ್ಪಿಸಬೇಕು. ಏಕೆಂದರೆ, ಹಿಂದೆ ಮಾಜಿ ಮುಖ್ಯಮಂತ್ರಿಗಳು ಇಬ್ಬರೂ ಕೂಡ ಇದರಲ್ಲಿ involve ಆಗಿದ್ದರು ಎಂದು ಎಲ್ಲರೂ ಈ ವರದಿ ಪ್ರಕಾರ ಹೇಳುತ್ತಿದ್ದರು. ಯಾರೋ ಅಲ್ಲಗಳೆದರೂ ಕೂಡ ಇಲ್ಲ, ಎಲ್ಲರೂ ಇದ್ದಾರೆ ಎಂದು ಹೇಳಿದಾಗ ನೇರವಾಗಿ ಸಿ.ಬಿ.ಐ ತನಿಖೆಗೆ ಒಳಪಡಿಸಲಿ ನೋಡೋಣ. But ಈಗ ಏಕೆ ಬಂತು? ಯಾರ protection ಗೋಸ್ಕರ ಈ ಹೊಸ report ಬಂತು? ಏಕೆ transfer ಮಾಡಿದ್ದೀರಿ? ಈ ವಿಷಯವನ್ನು ಪ್ರಸ್ತಾಪ ಮಾಡಬೇಕು.

ಶ್ರೀ ಟಿ. ಬಿ. ಜಯಚಂದ್ರ :- It is a recent occurrence, today it has appeared in the press. ಇದರಲ್ಲಿ Motion shall not revive discussion on a matter which has been discussed in the same session. It is not the same subject; the subject is entirely new, because it is trying to patch up the whole thing. ಈ ನಿಯಾಮವಳಿಗಳನ್ನು ಪುಸ್ತಕದಲ್ಲಿಟ್ಟು, ತಮ್ಮ ಪರಮೋಚ್ಚ ಅಧಿಕಾರವಿದೆ. ಅದಕ್ಕೆ ಅವಕಾಶವನ್ನು ಮಾಡಿಕೊಡಬೇಕು. ಇದು ವಿಶೇಷ ಸಂದರ್ಭ ರಾಜ್ಯದ ಬೊಕ್ಕಸದ ದೃಷ್ಟಿಯಿಂದ ತಾವು ಇವತ್ತು ಒಪ್ಪಿಗೆ ಕೊಡಬೇಕು.

ಅಧ್ಯಕ್ಷರು :- ಈ ಹಿಂದೆ ನೀವು ನಿಲುವಳಿ ಸೂಚನೆ ಮಂಡಿಸಿದ್ದ ಸಂದರ್ಭದಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ ಎಂದರೆ, **"ಕಬ್ಬಿಣ ಅದಿರಿನ ಅಕ್ರಮ ಗಣಿಗಾರಿಕೆ ಹಾಗೂ ಬಳ್ಳಾರಿ ಜಿಲ್ಲೆಯ ಸಂಡೂರು ಭಾಗದಲ್ಲಿ ರಾಜ್ಯದ ಗಣಿ**

ಪ್ರದೇಶದಲ್ಲಿ ಅಕ್ರಮವಾಗಿ ಗಣಿಗಾರಿಕೆ ಮಾಡುತ್ತಿರುವ ಆಂಧ್ರದ ಗಣಿ ಮಾಲೀಕರು ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಅವ್ಯಾಹತವಾಗಿ ಕೊಳೆ ಹೊಡೆಯುತ್ತಿದ್ದು, ಇದರಿಂದ ರಾಜ್ಯದ ಜನತೆಗೆ ಹತ್ತಾರು ಸಾವಿರ ಕೋಟಿ ರೂ.ಗಳಷ್ಟು ನಷ್ಟವಾಗುತ್ತಿದೆ. ಈ ಸಂಗತಿಯನ್ನು ಪುಷ್ಟೀಕರಿಸಿ ಮಾನ್ಯ ಲೋಕಾಯುಕ್ತರು ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಗಳು ವರದಿಗಳನ್ನು ಸಲ್ಲಿಸಿರುತ್ತಾರೆ." ಎಂದು ತಾವು ನಿಲುವಳಿ ಸೂಚನೆ ಕೊಟ್ಟಿದ್ದೀರಿ. ಇಲ್ಲಿ ನೀವು ರೆಫರೆನ್ಸ್ ಮಾಡಿದ್ದು ಏನೆಂದರೆ, ಲೋಕಾಯುಕ್ತರ ರೆಫರೆನ್ಸ್ ನಿಲುವಳಿ ಸೂಚನೆಯಲ್ಲಿದೆ. ಅಂದರೆ, ಇವತ್ತಿನ ನಿಲುವಳಿ ಸೂಚನೆಯಲ್ಲಿ ಏನಿದೆಯೆಂದರೆ, part and parcel of the earlier Adjournment Motion. ಹೀಗಾಗಿ, ನಿಮಗೆ ಇಲ್ಲಿ ಚರ್ಚಿಸಲು ಸಾಕಷ್ಟು ಅವಕಾಶಗಳಿವೆ.

ಇವತ್ತು ಅಕಸ್ಮಾತ್ ನಿಲುವಳಿ ಸೂಚನೆಯಡಿ ಈ ವಿಷಯ ಬರುವುದಿಲ್ಲವೆಂದರೆ, ಮುಂದೆ ನಾನು ಏನು ಮಾಡಬೇಕು? ನಿಯಮ 69ಕ್ಕೆ ಪರಿವರ್ತಿಸಿ ನಿಮಗೆ ಚರ್ಚಿಸಲು ಅವಕಾಶ ಕಲ್ಪಿಸಿಕೊಡಬೇಕು. ನಿಯಮ 69ಕ್ಕೆ ಪರಿವರ್ತಿಸುವುದಾದರೆ, ಈಗಾಗಲೇ ಅಜೆಂಡಾದಲ್ಲಿ ನಿಯಮ 69ರಡಿ ಪ್ರಸ್ತಾಪಿಸಲ್ಪಡುವ ವಿಷಯ ಇದೆ. ಅದಕ್ಕೋಸ್ಕರ, ನಾನು ಈಗ ಹೇಳುವುದೇನೆಂದರೆ, ಇವತ್ತು ನಿಮ್ಮೆಲ್ಲರ ಅಭಿಪ್ರಾಯಗಳನ್ನು ಕ್ರೋಢೀಕರಿಸಿಕೊಂಡಿದ್ದೇನೆ. ನಿಲುವಳಿ ಸೂಚನೆಯಡಿ ನೀವು ಈ ವಿಷಯವನ್ನು ಏನು ಮಂಡಿಸಿದ್ದೀರಿ, ಇವತ್ತು ನಿಲುವಳಿ ಸೂಚನೆಯಡಿ ಈ ವಿಷಯ ಬರುವುದಿಲ್ಲ. ಆದುದರಿಂದ, ನಾನು ಇದನ್ನು ತಿರಸ್ಕರಿಸುತ್ತೇನೆ. ನಾನು ಹೇಳುವುದನೆಂದರೆ. . .

(ಈ ಹಂತದಲ್ಲಿ ವಿರೋಧ ಪಕ್ಷದ ನಾಯಕರಾದ ಮಾನ್ಯ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ. ಇದರ ಬಗ್ಗೆ ನಾನು ಈಗ ರೂಲಿಂಗ್ ಕೊಡುತ್ತಿದ್ದೇನೆ. ಅದನ್ನೇ ನಾನು ಹೇಳುತ್ತಿದ್ದೇನೆ. ದಯವಿಟ್ಟು ಸಹಕರಿಸಿ. ಈಗಾಗಲೇ ಮೊದಲು ಸಲ್ಲಿಸಿದ್ದ ನಿಲುವಳಿ ಸೂಚನೆಯಲ್ಲಿ ಈ ವಿಷಯ ಬಂದಿದ್ದರಿಂದ, ಆ ಕಾರಣದ ಮೇಲೆ ಈ ನಿಲುವಳಿ ಸೂಚನೆಯನ್ನು ನಾನು ತಿರಸ್ಕರಿಸುತ್ತೇನೆ. ಆದರೆ, ಚರ್ಚೆಗೆ ಮಹತ್ವ ಬರಬೇಕು, ಚರ್ಚಿಸಬೇಕೆಂದು ನೀವು ಬಯಸಿದ್ದೀರಿ. ಚರ್ಚೆಗೆ ನಾವೂ ತಯಾರಿದ್ದೇವೆಂದು ಸರ್ಕಾರವೂ ಹೇಳಿದೆ. ಇದರ ಬಗ್ಗೆ ನಾನು ರೂಲಿಂಗ್ ಕೊಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಅಧ್ಯಕ್ಷರೆ, ಒಂದು ನಿಮಿಷ. ನೀವು ಈ ಸದನದ Supreme Authority. ಆದರೆ, ತಮ್ಮ ಅಧಿಕಾರವನ್ನು judicious ಆಗಿ ಉಪಯೋಗಿಸಬೇಕು.

ಅಧ್ಯಕ್ಷರು :- ನಾನು judicious ಆಗಿಯೇ ಉಪಯೋಗ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈ ರೂಲ್ಸ್ ಅನ್ನು suspend ಮಾಡಿ allow ಮಾಡುವುದಕ್ಕೆ ನಿಮಗೆ ಅಧಿಕಾರವಿದೆ. ಯಾವಾಗ ಅಧಿಕಾರ ಇದೆಯೆಂದರೆ, ತಾವು ರಾಜ್ಯದ ಮತ್ತು ಜನರ ಹಿತದೃಷ್ಟಿಯಿಂದ ರೂಲ್ ಅನ್ನು ಸಸ್ಪೆಂಡ್ ಮಾಡಿ Adjournment Motionಗೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು :- OK. ಅದಕ್ಕೋಸ್ಕರ, ನಾನು ಈ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ. . .

(ಮಾನ್ಯ ಸದಸ್ಯರಾದ ಶ್ರೀ ನೆ.ಲ. ನರೇಂದ್ರಬಾಬುರವರು ಮಾತನಾಡಲು ಎದ್ದು ನಿಂತರು)

ಅಧ್ಯಕ್ಷರು :- ನರೇಂದ್ರಬಾಬುರವರೆ, ನಾನು ಈಗ ರೂಲಿಂಗ್ ಕೊಡುತ್ತಿದ್ದೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ನೆ.ಲ. ನರೇಂದ್ರಬಾಬು :- ನಾನೂ ಸಹ ಅದಕ್ಕೆ signatory ಆಗಿದ್ದೇನೆ.

ಅಧ್ಯಕ್ಷರು :- ಬೇಡ, ಬೇಡ. ಮತ್ತೆ ಚರ್ಚೆ ಬೇಡ. ಈಗಾಗಲೇ ನಿಮ್ಮ ಹಿರಿಯ ನಾಯಕರು ಮಾತನಾಡಿದ್ದಾರೆ. ಪ್ಲೀಸ್, ದಯವಿಟ್ಟು ಕುಳಿತುಕೊಳ್ಳಿ. ನಾನು ರೂಲಿಂಗ್ ಕೊಡುತ್ತಿದ್ದೇನೆ. ರೂಲ್ 69ರಡಿ. . .

(ಮಾನ್ಯ ಸದಸ್ಯರಾದ ಶ್ರೀ ನೆ.ಲ.ನರೇಂದ್ರಬಾಬುರವರು ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು :- ನಾನು ಮಾತನಾಡುವಾಗ ತಾವು ದಯವಿಟ್ಟು ಕುಳಿತುಕೊಳ್ಳಬೇಕು. ಪ್ಲೀಸ್, ನಾನು ಹೇಳಿದ್ದೇನಲ್ಲ. ನಿಮ್ಮ ವಿರೋಧ ಪಕ್ಷದ ನಾಯಕರು, ಉಪ ನಾಯಕರಾದ ಜಯಚಂದ್ರರವರು ಮತ್ತು ಇತರರು ಮಾತನಾಡಿದ್ದಾರೆ.

ಈ ರೀತಿ ಪದೇ ಪದೇ ಮಾತನಾಡುವುದಾದರೆ, ಅದು ಸರಿ ಅಲ್ಲ....ನರೇಂದ್ರಬಾಬುರವರೆ, ದಯವಿಟ್ಟು ಕುಳಿತುಕೊಳ್ಳಿ. No, please. ಅದಕ್ಕೋಸ್ಕರ, ಇವತ್ತಿನ ನಿಲುವಳಿ ಸೂಚನೆಯಲ್ಲಿ ಈ ವಿಷಯು ಪುನ: ಪ್ರಸ್ತಾಪವಾಗಿರುವುದರ ಹಿನ್ನೆಲೆಯಲ್ಲಿ ನಿಲುವಳಿ ಸೂಚನೆಯನ್ನು ನಾನು ತಿರಸ್ಕರಿಸುತ್ತೇನೆ. ರೂಲ್ 69ರಡಿ ಈಗಾಗಲೇ ಅಕ್ರಮ ಗಣಿಗಾರಿಕೆ ಬಗ್ಗೆ ಅಜೆಂಡಾದಲ್ಲಿ ನಿಗದಿಯಾಗಿದೆ. Calling Attentions ಏನಿವೆ, ಅವು ಮುಗಿದ ತಕ್ಷಣ ಮೊದಲು ಇದನ್ನು ತೆಗೆದುಕೊಳ್ಳುತ್ತೇನೆ. ಗಮನ ಸೆಳೆಯುವ ಸೂಚನೆಗಳಾದ ನಂತರ, ಮೊದಲನೇ ಅಜೆಂಡಾದಲ್ಲಿ ಅದನ್ನೇ ತೆಗೆದುಕೊಳ್ಳುತ್ತೇನೆ. ಅಲ್ಲಿಂದ ನಾವು ಚರ್ಚೆ ಪ್ರಾರಂಭಿಸೋಣ. ನಿಲುವಳಿ ಸೂಚನೆ ಆದ ತಕ್ಷಣವೇ ತೆಗೆದುಕೊಳ್ಳುತ್ತೇನೆ. ನಿಲುವಳಿ ಸೂಚನೆ ಮೇಲಿನ ಚರ್ಚೆ ಬಹಳ ಹೊತ್ತು ಆಗುವುದಿಲ್ಲ. ಅದಾದ ತಕ್ಷಣವೇ ಅಜೆಂಡಾದಲ್ಲಿ ಮೊದಲು ನಿಮ್ಮ ವಿಷಯವನ್ನೇ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ರೋಷನ್ ಬೇಗ್ :- ಮಾನ್ಯ ಸಭಾಧ್ಯಕ್ಷರೆ, **"ಹಿಂದೂ"** ಪತ್ರಿಕೆಯಲ್ಲಿ ಬಂದಿರುವ ರಿಪೋರ್ಟ್ ನೋಡಿ. ಸಂತೋಷ್ ಹೆಗ್ಡೆಯವರು, This is very unfortunate ಎಂದು ಹೇಳುತ್ತಾರೆ. ದಯವಿಟ್ಟು ಈಗಲೇ ತೆಗೆದುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಈಗ ತಾವು ಇದಕ್ಕಾದರೂ ಮಹತ್ವ ಕೊಡಿ. ನೀವು appoint ಮಾಡಿದ ಲೋಕಾಯುಕ್ತದವರು ಹೇಳುತ್ತಾರೆ. Reacting to the development Mr. Hegde said. That it was very unfortunate. ಅವರಿಗೆ unfortunate ಆದರೆ ನಿಮಗೆ fortunate?

ಅಧ್ಯಕ್ಷರು :- ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಚರ್ಚೆ ಮಾಡಿ, ತಮಗೆ ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್ :- ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಉದ್ದೇಶಿಸಿ ತಮಗೆ ಪತ್ರ ಕಳುಹಿಸಿಕೊಟ್ಟಿದ್ದೆ.

ಅಧ್ಯಕ್ಷರು :- ಆ ಪತ್ರ ಬಂದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಅಧ್ಯಕ್ಷರೆ, ನನಗೆ ಅರ್ಥ ವಾಗುತ್ತಿಲ್ಲ. ತಾವು ನಮ್ಮನ್ನು ಬಹಳ ಲಘುವಾಗಿ ತೆಗೆದುಕೊಂಡಿದ್ದೀರಿ.